ಬೆಂಗಳೂರುರವರಿಗೆ ಬಿಲ್‌ಗಳ ಪಾವತಿಗಾಗಿ ಬೇಡಿಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

2) ಬಂದಿದ್ದರೆ ಬಿಲ್‌ಗಳ ಪಾವತಿಯಾಗದೇ ಇರಲು ಕಾರಣಗಳೇನು ?

3) ಬಿಲ್‌ಗಳ ಪಾವತಿ ಯಾವಾಗ ಮಾಡುತ್ತೀರಿ ?

4) ನಿಧಾನ ಮಾಡಿರುವ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳುವಿರಿ ?

ಶ್ರೀಮತಿ ನಾಗಮ್ಮ ಕೇಶಮೂರ್ತಿ:– (ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವರು):– ಮಾನ್ಯ ಸಹಕಾರಿ ಸಚಿವರ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳ ನಿಬಂಧಕರ ಕಛೇರಿಯಲ್ಲಿ ಲಭ್ಯವಿರುವ ಮಾಹಿತಿಯ ಪ್ರಕಾರ ಕೋಲಾರ ಜಿಲ್ಲಾಧಿಕಾರಿಯವರ ಪತ್ರ ದಿನಾಂಕ 12–3–1992 ರಂದಿಗೆ ವಿಫಲಭಾವಿಗಳ 93 ಅರ್ಜಿಗಳು ಮತ್ತು ದಿನಾಂಕ 8.12.1992 ರಂದಿಗೆ 39 ಅರ್ಜಿಗಳು ಒಟ್ಟು 132 ಅರ್ಜಿಗಳು ಬಂದಿದ್ದವು. ವಿಫಲ ಭಾವಿಗಳ ಪರಿಹಾರ ನೀಡುವ ಬಗ್ಗೆ ಹಣವನ್ನು ಸಹಕಾರ ಇಲಾಖೆಗೆ ಕಂತಿನ ಮೇಲೆ ನೀಡಲಾಗುವುದರಿಂದ ಜಿಲ್ಲೆಗಳಿಗೆ ಕೂಡ ಈ ಹಣವನ್ನು ಹಂತಹಂತವಾಗಿ ಬಿಡುಗಡೆ ಮಾಡಲಾಗುತ್ತಿದೆ.

ಜನವರಿ 1993ರಲ್ಲಿ ಕೋಲಾರ ಜಿಲ್ಲೆಗೆ 14 ವಿಫಲ ಭಾವಿಗಳ ಬಾಬ್ತು ಪರಿಹಾರ ನೀಡುವ ಬಗ್ಗೆ ರೂ. 1,47,278–00 ಗಳನ್ನು ಬಿಡುಗಡೆ ಮಾಡಲಾಗಿತ್ತು. ಈಗ ಸರ್ಕಾರದಿಂದ ರೂ. 2.50 ಕೋಟಿ ಬಿಡುಗಡೆಯಾಗುವ ನಿರೀಕ್ಷೆ ಇದೆ ಮತ್ತು ಮುಳಬಾಗಿಲು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಿಂದ ಬಂದಿರುವ ಆಪಾದನೆಯ ಮೇಲೆ ಸಮೂದಿಸಿರುವ 132 ಪ್ರಕರಣಗಳಲ್ಲಿ ಬೇಕಾಗಿರುವ ಹಣ ಸರ್ಕಾರದಿಂದ ಬಿಡುಗಡೆಯಾದ ನಂತರ, ಬಿಡುಗಡೆ ಮಾಡುವುದು ಸಾಧ್ಯವಾಗುವುದು. ಸರ್ಕಾರದಿಂದ ಹಣ ಬಿಡುಗಡೆ ಆಗದೇ ಇರುವ ಕಾರಣದಿಂದ ಈ ಹಣವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡುವಲ್ಲಿ ವಿಳಂಬವಾಗಿರುವುದರಿಂದ ಯಾವುದೇ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ.

3. ರಾಜಾಜಿನಗರದ ಮಿಲ್ಕ್ ಕಾಲೋನಿಯ ಹತ್ತಿರವಿರುವ ಜಾಗದಲ್ಲಿ ಆಟದ ಮೈದಾನ ನಿರ್ಮಾಣ

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):– ಮಾನ್ಯ ಅಧ್ಯಕ್ಷರೆ, ರಾಜಾಜಿನಗರಕ್ಕೆ ಸೇರಿದ ಮಿಲ್ಕ್ ಕಾಲೋನಿ ಪಕ್ಕದಲ್ಲಿರತಕ್ಕ ಉತ್ತರ ದಕ್ಷಿಣಕ್ಕೆ ಇರತಕ್ಕ ಕೆರೆಯ ಅವರಣ ಈ ಸ್ಥಳ ಆಟದ ಮೈದಾನದ ಅವರಣ ಮಾಡಲು ಉತ್ತಮ ಸ್ಥಳವಾಗಿದೆ ಮತ್ತು ಸುಬ್ರಹ್ಮಣ್ಯನಗರ, ಗಾಯತ್ರಿನಗರ, ಶ್ರೀರಾಮಪುರ, ರಾಜಾಜಿನಗರ 1ನೇ ಬ್ಲಾಕ್, 2ನೇ ಬ್ಲಾಕ್ ಈ ಭಾಗದ ಯುವಕರಿಗೆ ಆಟವಾಡಲು ಉತ್ತಮ ಆಟದ ಮೈದಾನ ಇದರ ಹೊರತು ಬೇರೆ ಯಾವುದೇ ಸ್ಥಳ ಇಲ್ಲದೆ ಇರುವುದರಿಂದ ಮಾನ್ಯ ಯುವಜನ ಇಲಾಖೆ ಸಚಿವರನ್ನು ಈ ಸ್ಥಳವನ್ನು ತಮ್ಮ ಇಲಾಖೆ ತೆಗೆದುಕೊಂಡು ಉತ್ತಮವಾದ ಆಟದ ಸ್ಟೇಡಿಯಂ ಮಾಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜಕಲ್ಯಾಣ ಸೇಚಿವರು):– ಮಾನ್ಯ ಅಧ್ಯಕ್ಷರೆ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಸಚಿವರ ಪರವಾಗಿ ಈ ಹೇಳಿಕೆ ನೀಡಬಯಸುತ್ತೇನೆ.

ಈ ನಿವೇಶನವು ಬೆಂಗಳೂರು ಮಹಾನಗರ ಪಾಲಿಕೆಯ ಒಂಭತ್ತನೇ ವಿಭಾಗಕ್ಕೆ ಸೇರಿದ್ದಾಗಿದ್ದು,

ನಗರಪಾಲಿಕೆಯು ಆಸ್ತಿಯಾಗಿರುತ್ತದೆ. ಈ ನಿವೇಶನದಲ್ಲಿ ಕೇವಲ 200 ಮೀಟರ್ ಉದ್ದದ ಓಟದ ಟ್ರ್ಯಾಕ್ ಸಿದ್ಧಪಡಿಸಬಹುದಾಗಿರುತ್ತದೆ. ಈ ಯೋಜನೆಯನ್ನು ಬೆಂಗಳೂರು ಮಹಾನಗರ ಪಾಲಿಕೆಯಿಂದ ಕಾರ್ಯಗತಗೊಳಿಸಬೇಕಾಗಿದೆ.

ಭಾರತ ಸರ್ಕಾರದ ಯೋಜನೆಯನ್ವಯ 200 ಮೀಟರ್ ಟ್ರ್ಯಾಕ್ ಮಾಡಬಹುದಾದ ಸ್ಟೇಡಿಯಂಗೆ ಗರಿಷ್ಠ 6 ಲಕ್ಷ ರೂಪಾಯಿಗಳ ಧನಸಹಾಯ ದೊರೆಯಲಿದೆ. ಬೆಂಗಳೂರು ನಗರಪಾಲಿಕೆಯಿಂದ ಸೂಕ್ತವಾದ ಪ್ರಸ್ತಾವನೆ ಬಂದಲ್ಲಿ ಧನ ಸಹಾಯಕ್ಕಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ.

4. ರೇಷ್ಮೆಬೆಳೆಗಾರರಿಗೆ ವಿಮಾ ಸೌಲಭ್ಯ ಜಾರಿ

ಶ್ರೀ ಡಿ.ಆರ್. ಪಾಟೀಲ್ (ಗದಗ):- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರೇಷ್ಮೆ ಸಚಿವರಿಂದ ಕೆಳಗಿನ ಸಲಹೆಗಳ ಬಗ್ಗೆ ಸೂಕ್ತ ಪ್ರತಿಕ್ರಿಯೆಯನ್ನು ಅಪೇಕ್ಷಿಸುತ್ತೇನೆ.

1) ರೈತನ ಹತೋಟಿಯಲ್ಲಿರದ ಕಾರಣಗಳಿಂದ ಬೆಳೆಗಳು ಹಾಳಾಗುತ್ತವೆ. ಆದ್ದರಿಂದ ರೇಷ್ಮೆ ಬೆಳೆಗಾರರಿಗೆ ಪೂರ್ಣ ವಿಮಾ ಯೋಜನೆಯನ್ನು ಜಾರಿಗೆ ತರಬೇಕು.

2) ಹಳೇ ಮೈಸೂರು ಪ್ರಾಂತ್ಯದಲ್ಲಿರುವ ರೇಷ್ಮೆಗೂಡು ಮಾರುಕಟ್ಟೆಗಳಲ್ಲಿ ಸರ್ಕಾರಿ ಉದ್ದಿಮೆಗಳಿಗಾಗಿ ಗೂಡನ್ನು ಖರೀದಿಸುವ ವ್ಯವಸ್ಥೆ ಇದೆ. ಆದರೆ ಈ ಸೌಲಭ್ಯ ಉತ್ತರ ಕರ್ನಾಟಕದ ಪ್ರದೇಶಗಳಲ್ಲಿರುವುದಿಲ್ಲ. ಉತ್ತರ ಕರ್ನಾಟಕದ ಪ್ರಮುಖ ಕೇಂದ್ರಗಳಲ್ಲಿ ಈ ಉದ್ದಿಮೆಗಳಿಗಾಗಿ ಗೂಡನ್ನು ಖರೀದಿಸುವ ಕೇಂದ್ರಗಳನ್ನು ಸ್ಥಾಪಿಸಬೇಕು.

3) ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಸೌಲಭ್ಯ ಹಾಗೂ ಪ್ರೋತ್ಸಾಹ ಧನ ಇದ್ದಂತೆ ಹಿಪ್ಪುನೇರಳೆ ಬೇಸಾಯಕ್ಕೂ ಕೂಡ ಈ ಸೌಲಭ್ಯವನ್ನು ವಿಸ್ತರಿಸಬೇಕು. ನೀರಿನ ಅಭಾವದಿಂದ ಈ ಸೌಲಭ್ಯ ತೀರಾ ಅವಶ್ಯವಾಗಿದೆ. ಬ್ಯಾಂಕಿನಿಂದ ಸಾಲ ಪಡೆಯದೆಯೂ ಕೂಡ ಹನಿ ನೀರಾವರಿ ಅಳವಡಿಸಿದರೆ ಪ್ರತಿಶತ 50 ಸಹಾಯಧನ ಪಡೆಯಲು ಅರ್ಹತೆ ಕೊಡಬೇಕು.

4) ರಾಸಾಯನಿಕ ಕೃಷಿಯಿಂದ ಮಣ್ಣಿನ ಫಲವತ್ತತೆ ಹಾಗೂ ಗುಣಮಟ್ಟ ಕಳಪೆಯಾಗುತ್ತಿರುವುದು ಕಂಡುಬಂದಿದೆ. ಆದ್ದರಿಂದ ಸಂಪೂರ್ಣ ಸಾವಯವ ರೀತಿಯಲ್ಲಿ ಹಿಪ್ಪುನೇರಳೆ ಬೇಸಾಯವನ್ನು ಮಾಡುವ ತಾಂತ್ರಿಕತೆಯ ಬಗ್ಗೆ ಸಂಶೋಧನೆ ಮಾಡಿ ಅಭಿವೃದ್ಧಿಪಡಿಸಿ ರೈತರಿಗೆ ಒದಗಿಸಬೇಕು.

ಡಾ. ಜಿ. ಪರಮೇಶ್ವರ (ರೇಷ್ಮೆ ಸಚಿವರು):– ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆ ನೀಡ ಬಯಸುತ್ತೇನೆ.

ಕೆಲವೊಂದು ಸಾರಿ ವಾತಾವರಣದ ವೈಪರೀತ್ಯಗಳಿಂದ ರೈತರು ಎಷ್ಟೇ ಹತೋಟಿ ಕ್ರಮ ತೆಗೆದುಕೊಂಡರೂ ಸಹ ಬೆಳೆಗಳು ಭಾಗಶಃ ಎಲ್ಲೋ ಒಂದೊಂದು ಸಾರಿ ಪೂರ್ಣ ಹಾಳಾಗುತ್ತವೆ. ರೇಷ್ಮೆ ಬೆಳೆಗಾರರಿಗೆ ಪೂರ್ಣ ವಿಮಾ ಯೋಜನೆಯನ್ನು ತರುವ ಬಗ್ಗೆ ಸಂಬಂಧಪಟ್ಟ ವಿಮಾ ಕಂಪನಿಯವರ ಜೊತೆ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಹಳೆಯ ಮೈಸೂರು ಪ್ರದೇಶದಲ್ಲಿರುವ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ವ್ಯವಹಾರವಾಗತಕ್ಕಂತ ಒಟ್ಟು ಮೊತ್ತ ಗೂಡಿನಲ್ಲಿ ಶೇಕಡ 3ರಿಂದ 4ರಷ್ಟನ್ನು ಮಾತ್ರ ಸರ್ಕಾರಿ ಉದ್ಯಮಗಳು ಖರೀದಿಸುತ್ತಿವೆ. ಆದರೆ ಎಲ್ಲಾ ಮಾರುಕಟ್ಟೆಗಳಲ್ಲಿ ಖರೀದಿಸುತ್ತಾ ಇಲ್ಲ. ಖರೀದಿಸತಕ್ಕಂಥ ಪ್ರಮುಖ ಮಾರುಕಟ್ಟೆಗಳೆಂದರೆ, ಕೊಳ್ಳೇಗಾಲ, ಸಂತೇಮಾರನಹಳ್ಳಿ, ರಾಮನಗರ, ವಿಜಯಪುರ, ಶಿಡ್ಲಘಟ್ಟ, ಕನಕಪುರ, ಉತ್ತರ ಕರ್ನಾಟಕದಲ್ಲಿ ಕೆ.ಎಸ್.ಐ.ಸಿ. ಮತ್ತು ತೋಳಹುಣಸೆಯಲ್ಲಿ ಸ್ಥಾಪಿಸಿರುವ ಸರ್ಕಾರಿ